ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್: ತಾವು ದಯಮಾಡಿ ಆ ರೀತಿ ಮಾತನಾಡಬೇಡಿ. ಯಾವುದೇ ಕಾರ್ಯಕ್ರಮಕ್ಕೆ ನಾನು ಒಪ್ಪಿಕೊಂಡ ಮೇಲೆ ತಪ್ಪಿಸುವುದಿಲ್ಲ. ಅನಿವಾರ್ಯದಿಂದ ಅದಕ್ಕೆ ಬರಲು ಆಗಲಿಲ್ಲ. ಅನಿವಾರ್ಯವಾಗಿ ಒಮ್ಮೊಮ್ಮೆ ಆ ರೀತಿಯಾಗುತ್ತದೆ.

ಖ) ಮುರುಡೇಶ್ವರ ಸೀಫುಡ್ ಕಾರ್ಖಾನೆ ಮುಚ್ಚಿರುವುದು.

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಅಧ್ಯಕ್ಷರೆ, ಪ್ರತಿಷ್ಠಿತ ಮುರುಡೇಶ್ವರ ಸೀಫುಡ್ ಕಾರ್ಖಾನೆ ಅನಿವಾರ್ಯ ಕಾರಣಗಳಿಂದ ಕಳೆದ ಮೂರು ವರ್ಷಗಳಿಂದ ಮುಚ್ಚಿದ್ದಾರೆ. ಅಲ್ಲಿನ ಖಾಯಂ ನೌಕರರು ಪರಿಹಾರಕ್ಕಾಗಿ ಹೋರಾಟವನ್ನು ನಡೆಸಿದರು. ಮಾಲೀಕರು ಮತ್ತು ಕಾರ್ಮಿಕರ ನಡುವೆ ಅಧಿಕಾರಿಗಳ ಸಮಕ್ಷಮ ಸಂಧಾನವಾಗಿ, 4.6.1997ರ ಆ ಸಭೆಯಲ್ಲಿ 22 ಲಕ್ಷದ 79 ಸಾವಿರ ಹಣವನ್ನು ಕೊಡಬೇಕೆಂದು ತೀರ್ಮಾನವಾಗಿರುತ್ತದೆ. ಅದರಂತೆ 16-3-98ರಂದು ಬಡ್ಡಿ ಸಮೇತ 22 ಲಕ್ಷದ 79 ಸಾವಿರದ 52 ರೂಪಾಯಿಗಳನ್ನು ಮಾಲೀಕರು, ಬೆಳಗಾಂ ವಿಭಾಗದ ಲೇಬರ್ ಕಮೀಷನ್‌ರವರ ಖಾತೆಗೆ ಜಮಾ ಮಾಡಿದ್ದಾರೆ. ಎರಡೂವರೆ ತಿಂಗಳುಗಳಾದರೂ ಕಾರ್ಮಿಕರಿಗೆ ಹಣ ಸಂದಾಯವಾಗಿಲ್ಲ. ಅಧಿಕಾರಿಗಳು ಮತ್ತು ಕಾರ್ಮಿಕರು ಕೂಡಿ ಇದಕ್ಕೆ 15 ಪರ್‌ಸೆಂಟ್ ಹಣವನ್ನು ಸೇರಿಸಿಕೊಡಬೇಕೆಂದು ದೂರಿದ್ದಾರೆ. ಕೂಡಲೇ ಕಾರ್ಮಿಕರಿಗೆ ಹಣ ಪಾವತಿಯಾಗಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಸತ್ಯನಾರಾಯಣ್ (ಕಾರ್ಮಿಕ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೇನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಬೆಳಗಾಂ ವಿಭಾಗದ ಡೆಪ್ಯೂಟಿ ಕಮೀಷನ್‌ರವರಿಂದ ವರದಿಯನ್ನು ತರಿಸಿಕೊಂಡು ಬೇಗನೆ ಹಣವನ್ನು ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಗ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಭಾರಿ ಮಳೆಯಿಂದ ಬೆಳೆ ಹಾನಿಯಾಗಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಇತ್ತೀಚೆಗೆ ಬಹಳ ಗಾಳಿ ಬೀಸಿ, ದೊಡ್ಡ ಪ್ರಮಾಣದಲ್ಲಿ ಆಲಿಕಲ್ಲುಗಳು ಬಿದ್ದು ಸಹಸ್ರಾರು ತೆಂಗಿನ, ಅಡಿಕೆ, ಬಾಳೆ ಮರಗಳು ನಾಶವಾಗಿದೆ. ಬಾಳೆ ಬೆಳೆಗೆ ಬಹಳ ನಾಶವಾಗಿದೆ. ಹೋದ ವರ್ಷ ಇದೇ ಕಾಲದಲ್ಲಿ ನನ್ನ ಕ್ಷೇತ್ರದ ಅಂದನಕೆರೆ ಹೋಬಳಿಯಲ್ಲಿ ಇದೇ ರೀತಿ 2-3 ಸಾವಿರ ತೆಂಗಿನ ಮರಗಳು ನಾಶವಾಗಿ ರೈತರು ಕಂಗಾಲಾಗಿದ್ದರು. ಈ ವರ್ಷ ಸಹ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಘನ ಸರ್ಕಾರದವರು ಇವರಿಗೆ ತಾತ್ಕಾಲಿಕವಾಗಿ ಏನಾದರೂ ಪರಿಹಾರ ಕೊಡುವ ವ್ಯವಸ್ಥೆ ಮಾಡಬೇಕು. ಏತಕ್ಕಾಗಿ ಈ ಭಾಗದಲ್ಲಿ ಈ ರೀತಿಯಾಗುತ್ತದೆ ಎಂಬ ಬಗ್ಗೆ ಅವಲೋಕನ ನಡೆಸಬೇಕು. ಏಪ್ರಿಲ್,